ಉಂಟಾಗುವಷ್ಟು ಬೆಳೆದುಬಿಟ್ಟಿತು. ಅದ್ರಾಮ ರನ್‌ಔಟ್ ಹೌದೋ ಅಲ್ಲವೋ ಎಂಬ ವಿಚಾರದಲ್ಲಿ ಉಂಟಾದ ಪುಟ್ಟ ಜಗಳ ಬೃಹದಾಕಾರವಾಗಿ ಬೆಳೆಯಿತು. 'ಬೃಹತ್' ಎಂದರೆ ನಮ್ಮ ಹಳ್ಳಿಮಟ್ಟಿಗೆ ಎಂದು ದಯವಿಟ್ಟು ಓದುಗ ಮಹಾಶಯರು ತಿಳಿಯಬೇಕು. ಪೊಲೀಸು ಜೀಪು ಬರುವ ಮಟ್ಟಿಗೆ ಲಡಾಯಿ ಬೆಳೆಯದಿದ್ದರೂ ಪೊಲೀಸ್ ಕಂಪ್ಲೇಂಟ್ ಕೊಡುತ್ತೇನೆ ಎಂದು ಊರವರೊಬ್ಬರು ಹೇಳುವ ಮಟ್ಟಿಗೆ ಬೆಳೆದಿತ್ತು ಎಂದರೆ ಸದಾ ಶಾಂತವಾಗಿರುವ ನಮ್ಮ ಊರಲ್ಲಿ ಅದು ಎಂತಹ ರಣರಂಪ ಮಾಡಿರಬೇಕು ಎಂದು ನೀವೇ ಊಹಿಸಿಕೊಳ್ಳಿ. ನಡೆದದ್ದು ಇಷ್ಟು:

ತೋಟದ ಮನೆ ವೆಂಕ್ಟಪ್ಪ ಕಮ್ಲದ ಮೇಲೆ ಕುಳಿತ ರಾಮ-ಸೀತೆಯ ಚಿತ್ರ ಇರುವ ಪ್ರಿಂಟ್ ಕಾಗದದ ಪ್ರತಿಗಳನ್ನು ಊರವರಿಗೆಲ್ಲಾ ನೀಡಿ, 'ನಮ್ಮ ಊರಲ್ಲಿ ಭಜನೆ ಮಾಡಲು ಒಂದು ಸುಸಜ್ಜಿತ ಮಂದಿರ ಬೇಕು. ಅದಕ್ಕಾಗಿ ದೊಡ್ಡ ಹಾಲ್ ಇರುವ ಒಂದು ರಾಮಮಂದಿರ ಕಟ್ಟಬೇಕು. ಅದರಲ್ಲಿ ಸಂಜೆ ಭಜನೆ, ಮಧ್ಯಾಹ್ನ ಶ್ರೀರಾಮನ ಪೂಜೆ ಎರಡೂ ನಡೆಯುತ್ತದೆ' ಎಂಬ ಸಲಹೆ ಮುಂದಿಟ್ಟಿದ್ದ. ಮಂದಿರಕ್ಕಾಗಿ ಊರವರಿಂದ ಎಷ್ಟು ಹಣ ಸಂಗ್ರಹಿಸಬೇಕಾಗಬಹುದು ಎಂಬ ತೋರಮಟ್ಟಿನ ಅಂದಾಜು ಮಾಡಿದ್ದ. ಆ ಪ್ರಿಂಟ್ ಕಾಗದ ನಮ್ಮ ಊರವರು ಮಾಡಿಸಿದ್ದಲ್ಲ, ಅದು ವೆಂಕ್ಟಪ್ಪನಿಗೆ ಯಾರೋ ಕೊಟ್ಟದ್ದು. ಮುಂದಿನ ಸಲ ಅವ ಪಂಚಾಯತ್ ಮೆಂಬರ್ ಆಗಲು ಇದು ತಯಾರಿ ಎಂಬುದು ಕೆಲವರ ಗುಮಾನಿ.

ನಮ್ಮ ಊರಲ್ಲಿ ಹನುಮಂತನ ಗುಡಿ ಇದೆ. ಅದರಲ್ಲಿ ಒಳಗುಡಿಯ ಹಾಲ್ ಮತ್ತು ಹೊರಗಿನ ಹಾಲ್, ಹೀಗೆ ಎರಡು ಜಾಗ ಇದೆ. ಅಲ್ಲೇ ಬೇಕಾದರೆ ಭಜನೆ ಮಾಡಬಹುದು ಎಂದು ಆಗ ಬೇಲಿಮನೆ ರಾಮ ಹೇಳಿದ್ದ. ಅದಕ್ಕೆ, ದೇಶದ್ರೋಹಿಯ ಹಾಗೆ ಮಾತನಾಡಬಾರದು ಎಂದು ವೆಂಕ್ಟಪ್ಪ ಗದರಿಸಿದ್ದ. ನಮಗೀಗ ಊರಿಗೊಂದು ಹೈಸ್ಕೂಲ್ ಆದರೆ ಹೆಣ್ಣುಮಕ್ಕಳಿಗೆ ಅನುಕೂಲ ಎಂದು ನಾನು ಹೇಳಿದ್ದಷ್ಟೆ ಎಂದು ರಾಮಪ್ಪ ಗೊಣಗಿದ್ದ. ನೀವೆಲ್ಲ ಸುಮ್ನಿರಿ, ಅದಕ್ಕೆ ಜಗಳ ಯಾಕೆ ಎಂದು ಊರ ಹಿರಿಯರು ಹೇಳಿದಲ್ಲಿಗೆ ವಿಚಾರ ಮುಗಿದಿತ್ತು.

ಅದ್ರಾಮ ರನ್ನೌಟ್ ಆದದ್ದು ಬೇಲಿಮನೆ ರಮೇಶನ ಬೌಲಿಂಗ್‌ನಲ್ಲಿ. ಅದ್ರಾಮ ಬಾಯಿಬಿಡುವಷ್ಟರಲ್ಲಿ ತೋಟದ ಮನೆ ಶ್ರೀನಿವಾಸಮೂರ್ತಿ 'ಸುಮ್ನೆ ಹೇಳಿ ದ್ರೋಹ ಮಾಡಬೇಡ' ಎಂದ. 'ಯಾಕೋ ನಾನು ದ್ರೋಹಿ?' ಎಂದು ರಮೇಶ ಕೇಳ್ದ. ತಂದೆ ತಾಯಿಗಳ ಭಿನ್ನಾಭಿಪ್ರಾಯ ಆಟದೊಳಗೆ ಸೇರಿ ಮಂದಿರದಿಂದ ಸುರುವಾದದ್ದು ಮಕ್ಕಳ ನಡುವೆ ಮಾರಾಮಾರಿವರೆಗೆ ತಲುಪಿತು. ಊರವರೂ ಅಷ್ಟಿಷ್ಟು ಪಕ್ಷ ವಹಿಸಿದರೆ, ನಿಜವಾದ ಹಿರಿಯರು 'ಏನ್ರೋ ಇದು? ಕ್ರಿಕೆಟ್ ಆಡಿ ಪ್ರೈಸ್ ತಕ್ಕಳ್ಳಿ ಅಂದರೆ ಹೊಡೆದಾಟ ಮಾಡ್ತೀರಲ್ಲ, ಏನು ಕತೆ' ಎಂದರು.

ಮಾರನೇ ದಿನ ಮೈದಾನದ ಪಕ್ಕದ ಮರದಡಿಯ ವಿಚಾರಣೆಯಲ್ಲಿ ರಮೇಶ ಕೊಟ್ಟ ಕಂಪ್ಲೇಂಟ್‌ಗೂ ಆಟಕ್ಕೂ ಸಂಬಂಧವಿರಲಿಲ್ಲ. ರಮೇಶ ಹೇಳಿದ್ದು: 'ಜೈ ಸೀತಾರಾಮ್' ಅಂತ ನಾನು ಹೇಳಿದ್ದಕ್ಕೆ ಶೀನ 'ದ್ರೋಹಿ' ಎಂದ. 'ಯಾಕಂತೆ' ಎಂದರು ಊರಿಗೆ ಹಿರಿಯರಾದ ವೆಂಕಟರಾಮಾಚಾರ್ಯರು. 'ಜೈ ಸೀತಾರಾಮ್' ಎನ್ನುವುದು ಸಿದ್ದರಾಮರಂತೆ. 'ಜೈಶ್ರೀರಾಮ್' ಎಂದು ಹೇಳದವರು ದ್ರೋಹಿಗಳಂತ ಶ್ರೀನಿವಾಸಮೂರ್ತಿ ಹೇಳಿದ. 'ಇದೆಂತದಪ್ಪ ನಿಮ್ಮದು ಜಗಳ. ನೀನು ಯಾಕೆ ಸೀತಾರಾಮ್ ಎಂದೆ' ಎಂದು ಆಚಾರ್ಯರು ಕೇಳಿದರು. ರಮೇಶನ ನೇರ ಉತ್ತರ: 'ನಮ್ಮ ಮನೆ ದೇವರ ಕೋಣೆಯಲ್ಲಿರುವುದೇ ಸೀತಾ, ರಾಮ, ಲಕ್ಷ್ಮಣ, ಹನುಮಂತನಿರುವ ಫೋಟೊ. ಅವರ ಹಿಂದೆ ಭರತ, ಶತ್ರುಘ್ನರು ನಿಂತು ಚಾಮರ ಬೀಸುತ್ತಾರೆ. ಅದೇ ಸೀತಾರಾಮರ ಫೋಟೊಕ್ಕೆ ಪೂಜೆಯಲ್ಲಿ ಅಪ್ಪ ಊದುಬತ್ತಿ ಹಚ್ಚುತ್ತಾರೆ. ನಾವು ಸಂಜೆ ಭಜನೆ ಮಾಡುವಾಗ ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತಾರಾಮ್ ಎನ್ನುತ್ತೇವೆ, ಹೀಗಾಗಿ ಹೇಳಿದೆ ಅಷ್ಟೆ' ಎಂದ.

ಊರ ಹಿರಿಯರಿಗೆ ರಗಳೆಯಾಯಿತು. ಏನಪ್ಪಾ ಇವರ ಗಲಾಟೆ ಎಂದು ಮಿಲ್ಕ ಸೊಸೈಟಿಗೆ ಮನೆಯಲ್ಲಿ ಕರೆದ ಎರಡು ದನಗಳ ಹಾಲು ಕೊಟ್ಟು ಖಾಲಿ ಕ್ಯಾನನ್ನು ಕೈಯಲ್ಲಿ ಹಿಡಕೊಂಡು ಮನೆಗೆ ಹೋಗುವ ದಾರಿಯಲ್ಲಿ ಬಳಿಗೆ ಬಂದು ನಿಂತಿದ್ದ ಗೋವಿಂದರಾಯರನ್ನು ನೋಡಿದರು. ಅವರು ಶೃಂಗೇರಿಗೆ ಹೋಗಿ ಸ್ವಲ್ಪ ಸಂಸ್ಕೃತ, ಪೂಜೆಗೆ ಬೇಕಾದ ಮಂತ್ರ ಕಲಿತು ಬಂದವರು. ತುಸು ಕೃಷಿಭೂಮಿಯೂ ಇದೆ. ರಾಯರು